ನಿಜ್ವಾಗ಼್ೂ ಹೀಗೆ ಕಂಡ ಕಂಡವರ ಬಳಿ ಸಂಬಂಧ ಇಟ್ಕೊಂಡಿದ್ದೀರಾ? ಸೆಕ್ಸ್ ನಿಮ್ಮನ್ನ ಅಷ್ಟೊಂದು ಕಾಡುತ್ತಾ? ಒಬ್ಬ ಗಂಡನಿಂದ ನಿಮ್ಮ ಸೆಕ್ಸ್‌ನಾ ಕಡ್ಮೆ ಮಾಡ್ಲಿಕ್ಕೆ ಆಗ್ಲಿಲ್ವಾ? ನೀವ್ಯಾಕೆ ಗಂಡನ್ನ ಬಿಟ್ಟು, ಈ ರೀತಿ ಪ್ರಾಸ್ಟಿಟ್ಯೂಟ್ ತರ ಬದುಕ್ತೀರಾ? ನಿಮ್ಮನ್ನ ನೋಡಿದ್ರೆ ಒಳ್ಳೆ ಮನೆ ಹುಡ್ಗಿ ತರ ಕಾಣ್ತೀರಾ. ಯಾಕೆ ಹೀಗಾದ್ರಿ?" ಎಂದು ಒಂದೇ ಸಲ ಪ್ರಶ್ನೆಗಳ ಸುರಿಮಳೆಯನ್ನೆ ಸುರಿಸಿಬಿಟ್ಟೆ. ಆ ನಂತರವೇ ನೆನೆಪಾಗಿದ್ದು ಅವಳ ಹರಿತವಾದ ನಾಲಿಗೆ. ಅವಳು ನೇರವಾಗಿ ನನ್ನ ಮುಖ ನೋಡುತ್ತಾ ಹೇಳಿದ್ದು, "ಜನ ನನ್ನನ್ನು ಸರಿಯಿಲ್ಲಾಂತಾರೆ. ಕಾರಣ ಮಾತ್ರ ಒಬ್ರೂ ಕೇಳಿಲ್ಲ. ನೀವೆ ಮೊದಲು ಈ ರೀತಿ ಕೇಳಿದ್ದು" ಎಂದಳು. ಅದು ವ್ಯಂಗ್ಯವೊ, ಮತ್ತೊಂದೊ ನಾ ಅರಿಯೆ. ಸದ್ಯಕ್ಕೆ ನಾನು ಬಚಾವ್. ಅವಳು ಮತ್ತೆ ಮುಂದುವರಿದು, "ಸೆಕ್ಸ್ ಅನ್ನೋದು ಒಂದ್ರೀತಿ ಹಸಿವು, ಅದ್ನ ನಿಮ್ಗೆ ಹೇಳಿದ್ರೆ ಅರ್ಥ ಆಗಲ್ಲ. ಅದ್ನ ಅನುಭವಿಸಿದವರಿಗೆ ಗೊತ್ತು! ಆದ್ರೆ ಬೇರೆ ಗಂಡಿನ ಜೊತೆ ಸಂಬಂಧ ಇಟ್ಕೊಂಡಿರೋ ಎಲ್ಲ ಹೆಣ್ಣುಗಳು ತಮ್ಮನ್ನು ತಾವು ಕಂಟ್ರೋಲ್ ಮಾಡ್ಕೊಳಕ್ಕಾಗ್ದೆ ಸಂಬಂಧ ಇಟ್ಕೊಂಡಿರಲ್ಲ, ಅವರ್ಗೆ ಅವರ್ದೆ ಆದ ಕಾರ್‍ಣ ಇರುತ್ತೆ" ಎಂದು ನಯವಾಗಿ ಹೇಳಿ, ಒಂದು ರೀತಿಯಾಗಿ ನನ್ನತ್ತ ನೋಡಿದಳು. ನಾನು ಕೇಳಿದ್ದು ಅಸಂಬದ್ಧ ಎನಿಸಿರಬೇಕು. "ಸರಿ ಬಿಡಿ ಆ ವಿಷ್ಯ, ನೀವ್ಯಾಕೆ ಇಟ್ಕೊಂಡಿದ್ದೀರ ಹೇಳಿ. ಅಂತ ಕಾರಣ ಏನಿತ್ತು? ನಿಮ್ಮನ್ನ ನೋಡಿದ್ರೆ ಒಳ್ಳೆ ವಿಶ್ವಸುಂದರಿಯಂತೆ ಕಾಣ್ತೀರ. ಮತ್ಯಾಕೆ ಹೀಗಿದ್ದೀರಾ? ನಿಮ್ಮ ಬ್ಯೂಟಿಗೆ ಯಾವುದಾದ್ರೂ ದೊಡ್ಡಕುಳನೆ ಮದ್ವೆಯಾಗಬಹುದಿತ್ತಲ್ಲ" ಎಂದೆ. ಏಕೆಂದರೆ, 'ಸುಂದರಿಯರೆಲ್ಲ ಶ್ರೀಮಂತರ ಪಾಲು' ಎನ್ನುವುದು ನನ್ನ ಅಭಿಪ್ರಾಯ. ನನ್ನ ಪ್ರಶ್ನೆಗೆ ಉತ್ತರಿಸುವ ಬದಲಿಗೆ ಒಂದು ರೀತಿ ವಿಚಿತ್ರವಾಗಿ ನನ್ನತ್ತ ನೋಡಿ, ತನ್ನ ದಾರಿಯಲ್ಲಿ ನಡೆದುಬಿಟ್ಟಳು.

"ಇವತ್ತು ಲಂಚ್‌ಗೆ ನನ್ಜೊತೆ ಬನ್ನಿ" ಎಂದು ಗಂಭೀರವಾಗಿ ತಾಕೀತು ಮಾಡಿದವಳತ್ತ ನೋಡುವ ಧೈರ್ಯ ನನಗಿರಲಿಲ್ಲ. ನಿನ್ನೆ ಕೇಳಿದ ಪ್ರಶ್ನೆಗಳು ಅವಳ ಮರ್ಮಕ್ಕೆ ತಾಕಿರಬಹುದು. ಆದ್ದರಿಂದ ಇಂದು ಬೆಳಗ್ಗೆಯಿಂದ ಒಂದು ಮಾತೂ ಆಡದೆ ಮೌನವಾಗಿದ್ದವಳು ಈಗ ಲಂಚ್‌ಗೆ ಕರೆಯುತ್ತಿದ್ದಾಳೆಂದರೆ 'ಖಂಡಿತಾ ಚೆನ್ನಾಗಿ ಉಗಿತಾಳೆ' ಎಂದು ಒಳಗೆ ಭಯ ಶುರುವಾಯಿತು. ನನ್ನ ಪ್ರಶ್ನೆಗಳು ಅವಳನ್ನು ಅಷ್ಟೊಂದು ಅಪ್ಸೆಟ್ ಮಾಡಬಹುದೆಂದು ನಾನು ಕನಸಿನಲ್ಲಿಯೂ ಊಹಿಸಿರಲಿಲ್ಲ. ನಾನು ಕೇಳಿದ್ದು ನನಗೆ ಮಾಮೂಲಿ ಎನಿಸಿತು. ಆದರೆ, ಅವಳಿಗೆ!

ಅವಳು ಅವಳ ಜೊತೆಬಿಟ್ಟು, ನಾನು ನನ್ನ ಜೊತೆಬಿಟ್ಟು, ಎಲ್ಲರಿಗಿಂತ ದೂರವಾಗಿ ಮೂಲೆ ಟೇಬಲ್‌ನಲ್ಲಿ ಕುಳಿತು ಬಾಕ್ಸ್ ಬಿಚ್ಚಿದಾಗ, ಇಡೀ ಕ್ಯಾಂಟೀನ್‌ನಲ್ಲಿದ್ದ ಕಣ್ಣುಗಳು ಅಚ್ಚರಿ ಮತ್ತು ಕುತೂಹಲದಿಂದ ನೋಡುತ್ತಿದ್ದವು. ನಾನು ಅವಳ ಜೊತೆಗೆ ಹೋಗಿದ್ದಕ್ಕೆ ಅಚ್ಚರಿ. ಅವಳ ಜೊತೆ ಸೇರಿಕೊಂಡು ನಾನು ಮುಂದೇನು ಮಾಡುತ್ತೇನೆ ಎನ್ನುವ ಕುತೂಹಲ. ಇದೆಲ್ಲದರ ಆಚೆಗೆ ನನಗಿದ್ದ ಕುತೂಹಲ ತಣಿಸುವಂತೆ, "ನಾನು ಅಪ್ಪಅಮ್ಮನಿಗೆ ಒಬ್ಳೆ ಮಗ್ಳು" ಎಂದು ಮಾತು ಶುರು ಮಾಡಿದಳು. 'ಅಬ್ಬ! ಬದುಕಿದೆಯಾ ಬಡಜೀವವೆ' ಎಂದು ಎದೆಯ ಮೇಲೆ ಕೈ ಇಟ್ಟುಕೊಂಡೆ. ಹಿಂದೆಯೇ 'ಪ್ರಪಂಚದಲ್ಲಿ ಒಬ್ಳೆ ಮಗ್ಳು ಯಾರು ಇಲ್ಲ, ನೀನೊಬ್ಳೆ. ಮುಂದುವರ್ಸು' ಎನ್ನುವಂತೆ ವ್ಯಂಗ್ಯವಾಗಿ ಅವಳತ್ತ ನೋಡಿದೆ. ನನ್ನಲ್ಲಿ ಏನೇನಾಗುತ್ತಿದೆ ಎಂದು ಕಿರುಗಣ್ಣಿನಿಂದಲೂ ಗಮನಿಸದೆ, "ನಾನು ಒಬ್ಳೆ ಮಗ್ಳು ನಿಜಾ! ಮುದ್ದಾಗಿಯೇ ಸಾಕಿದ್ರು. ಆದ್ರೆ ನಾವು ಬಡತನದ ರೇಖೆಗಿಂತ ಕೆಳಗಲ್ಲ, ಪಾತಾಳದಲ್ಲಿದ್ದವರು. ವಾಸಕ್ಕೊಂದು ಮನೆ. ಚಿಕ್ಕದೊಂದು ಕಿರಾಣಿಯಂಗಡಿ, ಒಂದು ವಯಸ್ಸಾದ ಎಮ್ಮೆ. ಇಷ್ಟೆ ನಮ್ಮ ಆದಾಯದ ಮೂಲ. ಇಷ್ರಲ್ಲೆ ನಮ್ಮ ಮೂರು ಜನರ ಹೊಟ್ಟೆ ತುಂಬಬೇಕಿತ್ತು. ಹೇಗೋ ತುಂಬುತ್ತಿತ್ತು ಕೂಡ.

ಅಪ್ಪನಿಗೆ ಒಬ್ಬ ಅಣ್ಣ, ಇಬ್ರು ತಂಗಿಯರು. ಆ ಇಬ್ರಲ್ಲಿ ಒಬ್ಬ ತಂಗಿ ನಾನು ಹುಟ್ಟಿದ ದಿನವೇ ತನ್ನ